# ಮುಖ್ಯಮಂತ್ರಿಗಳಿಗೆ ಸಭಾಪತಿ ಬಸವರಾಜ ಹೊರಟ್ಟಿ ಸನ್ಮಾನ

❑ ಸ್ನೇಹಜೀವಿ ನ್ಯೂಸ್



ಗದಗ, ಜೂ.6. ಗ್ರಾಮೀಣ ಅಪ್ಪಟ ಪ್ರತಿಭೆಗಳಾದ ಹಾಗೂ ಇಂದಿಗೂ ಗ್ರಾಮೀಣ ಸೊಗಡನ್ನ ಬಿಟ್ಟುಕೊಡದ ಅಪರೂಪದ ಸಾಧಕ ಜೋಡಿಗಳಾದ ಹಾಗೂ ಆತ್ಮೀಯ ಸ್ನೇಹಿತರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮೂರನೇ ಬಾರಿ ಸಭಾಪತಿಯಾಗಿ ಕಾರ್ಯನಿರ್ವಹಿಸುತ್ತಿರುವ ಬಸವರಾಜ ಹೊರಟ್ಟಿ ಅವರು ಇಂದು ಮುಖ್ಯಮಂತ್ರಿಗಳ ಗೃಹ ಕಚೇರಿಗೆ ತೆರಳಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ "ಸ್ವಾತಂತ್ರ ಗಂಗೆಯ ಸಾವಿರ ತೊರೆಗಳು" ಎಂಬ ಅಮೂಲ್ಯ ಗ್ರಂಥವನ್ನು ಮುಖ್ಯಮಂತ್ರಿಗಳಿಗೆ ಸಭಾಪತಿ ಬಸವರಾಜ್ ಹೊರಟ್ಟಿ ನೀಡಿ ಗೌರವಿಸಿದರು.

ಇಬ್ಬರೂ ಎಷ್ಟೇ ಎತ್ತರಕ್ಕೆ ಬೆಳೆದರು ಪಕ್ಷ ರಾಜಕಾರಣ ಬೇರೆಬೇರೆಯಾದರು ನಾಲ್ಕು ದಶಕಗಳಿಂದ ಇಬ್ಬರ ಆತ್ಮೀಯತೆಗೆ ಗೆಳೆತನಕ್ಕೆ ಕೊರತೆಯಾಗಿಲ್ಲ. ಇಬ್ಬರು ಯಾವುದೇ ರಾಜಕೀಯ ಕುಟುಂಬದ ಹಿನ್ನೆಲೆ ಇರದೇ ಇರುವ ಕುಟುಂಬದಿಂದ ಬಂದವರು. ತಮ್ಮ ಸ್ವಯಂ ಪ್ರತಿಭೆ ಹೋರಾಟ ಛಲದಿಂದಲೇ ಮೇಲೆ ಬಂದವರು. ಮಧ್ಯಮ ಕುಟುಂಬದಿಂದ ಬಂದ ಇಬ್ಬರು ಅತ್ಯಂತ ಸಮೀಪದಿಂದ ಬಡತನ ಕಷ್ಟ ಗ್ರಾಮೀಣ ಜನರ ನೋವು ನಲಿವನ್ನ ಕಂಡವರು ಹೀಗಾಗಿ ಇಬ್ಬರ ಮನಸ್ಸು ಸದಾ ಗ್ರಾಮೀಣ ಜನರತ್ತ ಹೋಗುತ್ತದೆ. ಸಿದ್ದರಾಮಯ್ಯನವರು ತಮ್ಮ ಜನಪರ ಹೋರಾಟಗಳ ಮೂಲಕ ವಿವಿಧ ಖಾತೆಗಳ ಸಚಿವರಾಗಿ ಉಪಮುಖ್ಯಮಂತ್ರಿಗಳಾಗಿ ಪ್ರಸ್ತುತ ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದು ನಾಡಿನಲ್ಲಿಯೇ ಇತಿಹಾಸ. ಹೊರಟ್ಟಿ ಅವರು ಸಹ ಎಂಟು ಬಾರಿ ವಿಧಾನ ಪರಿಷತ್ತಿಗೆ ಆಯ್ಕೆಯಾಗುವ ಮೂಲಕ ಐತಿಹಾಸಿಕ ದಾಖಲೆ ನಿರ್ಮಿಸಿ ವಿವಿಧ ಖಾತೆಗಳ ಸಚಿವರಾಗಿ ಪ್ರಸ್ತುತ ಮೂರನೇ ಬಾರಿ ವಿಧಾನ ಪರಿಷತ್ತಿನ ಸಭಾಪತಿಗಳಾಗಿ ಸೇವೆ ಸಲ್ಲಿಸುತ್ತಿರುವ ಮೂಲಕ ಐತಿಹಾಸಿಕ ದಾಖಲೆಯನ್ನು ಬರೆದಿದ್ದಾರೆ.

ಇಂತಹ ಗ್ರಾಮೀಣ ಸೊಗಡಿನ ಅಪರೂಪದ ಸಾಧಕರು ಆತ್ಮೀಯ ಸ್ನೇಹಿತರು ಇಂದು ಮುಂಜಾನೆ ಮುಖ್ಯಮಂತ್ರಿಗಳ ಗ್ರಹ ಕಚೇರಿಯಲ್ಲಿ ಸಮಾಗಮ ಆಗಿದ್ದನ್ನು ಕಂಡು ಸಾರ್ವಜನಿಕರು ಖುಷಿಪಟ್ಟರು.

# ಅವಿಶ್ವಾಸ ನಿರ್ಣಯ ಮಂಡಿಸಿದರೆ ಸಭಾಪತಿ ಸ್ಥಾನದಲ್ಲಿ ಒಂದು ಕ್ಷಣವೂ ಕೂರುವುದಿಲ್ಲ:ಹೊರಟ್ಟಿ ಸ್ಪಷ್ಟ

❑ ಸ್ನೇಹಜೀವಿ ನ್ಯೂಸ್

ಬೆಂಗಳೂರು: ನನ್ನ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರೆ ಸಭಾಪತಿ ಸ್ಥಾನದಲ್ಲಿ ಒಂದು ಕ್ಷಣವೂ ಕೂರುವುದಿಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ.

ಸಿಎಂ ಸಿದ್ದರಾಮಯ್ಯ ಭೇಟಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪರಿಷತ್‌ನಲ್ಲಿ ಕಾಂಗ್ರೆಸ್‌ಗೆ ಬಹುಮತ ಇಲ್ಲ.

2024ರ ಜೂನ್ ವರೆಗೂ ಸಭಾಪತಿ ಸ್ಥಾನಕ್ಕೆ ಯಾವುದೇ ಸಮಸ್ಯೆ ಇಲ್ಲ. ಮುಂದಿನ ವರ್ಷ ಕೆಲವೊಂದು ಸ್ಥಾನಗಳು ತೆರವಾಗಲಿವೆ.



ಆಗ ಬಿಜೆಪಿಗೆ ಬಹುಮತ ಇಲ್ಲದಂತಾಗಬಹುದು. ಆದರೆ ಈಗ ಆ ರೀತಿಯ ಪರಿಸ್ಥಿತಿ ಇಲ್ಲ ಎಂದು ತಿಳಿಸಿದ್ದಾರೆ.

ಇಂದು ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದೆ. ಅವರ ಹಾಗೂ ನನ್ನ ಗೆಳೆತನ ಮೊದಲಿನಿಂದಲೂ ಗಟ್ಟಿಯಾಗಿದೆ. ಹಾಗಾಗಿ ಭೇಟಿ ಮಾಡಿದ್ದೆ ಹೊರತು ಯಾವುದೇ ರಾಜಕೀಯ ಕಾರಣಗಳಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.